## ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

## ಕೊಳಚೆ ನಿವಾಸಿಗಳಿಗಾಗಿ ಮನೆಗಳ ನಿರ್ಮಾಣ

೧೫೦೧. ಶ್ರೀ ಕೆ.ಜೆ. ಜಾರ್ಜ್ —ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫, ೧೯೮೪, ೧೯೮೫ನೇ ಇಸವಿಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಮನೆ ಕಟ್ಟಲು ಸರ್ಕಾರದವರು ಎಷ್ಟು ಹಣ ಮಂಜೂರು ಮಾಡಿದ್ದಾರೆ.

ಆ) ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಕೊಡಲಾಗಿದೆ.

ಇ) ರಾಜ್ಯದ ಯಾವ ಯಾವ ನಗರಗಳಲ್ಲಿ ಈ ಮನೆಗಳನ್ನು ಕಟ್ಟಿಕೊಡಲಾಗಿದೆ.

ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು). —

ಅ) ೧೯೮೫–೮೪ರಲ್ಲಿ... .....೬೨.೬೧ ಲಕ್ಷ ರೂ.ಗಳು.
೧೯೮೪–೮೫ರಲ್ಲಿ..... ೧೬೦.೮೦ ಲಕ್ಷ ರೂ.ಗಳು.
೧೯೮೫–೮೬ರಲ್ಲಿ.....೧೭ ೮೦ ಲಕ್ಷ ರೂ.ಗಳು.
(ನಿಗದಿಪಡಿಸಿರುವ ಮೊತ್ತ ೫೮.೪೧ ಲಕ್ಷ ರೂ.ಗಳು.) (ಡಿಸೆಂಬರ್ ೮೫ ಅಂತ್ಯದವರೆಗೆ ಬಿಡುಗಡೆ ಮಾಡಲಾಗಿದೆ)

ಆ) ೮೮೬.

ಇ) ಬೆಂಗಳೂರಿನಲ್ಲಿ..... ೮೪.
ಮೈಸೂರಿನಲ್ಲಿ.....೪೦೦.
ಹುಬ್ಬಳ್ಳಿ-ಧಾರವಾಡ
ಮಹಾ ನಗರ ಪಾಲಿಕೆ...೪೦೨.
ಪರಿವಿಂತಿಯಲ್ಲಿ

## ದಾವಣಗೆರೆಯಲ್ಲಿ ನಡೆಯುತ್ತಿರುವ ನ್ಯಾಯಾಲಯಗಳನ್ನೆಲ್ಲಾ ಒಂದೇ ಕಡೆ ತರುವುದು.

೧೭೮೫. ಶ್ರೀ ಪಂಪಾಪತಿ (ದಾವಣಗೆರೆ) —ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆಯಲ್ಲಿ ನ್ಯಾಯಾಲಯಗಳು ಬೇರೆ ಬೇರೆ ಕಡೆ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಆ) ಇವುಗಳನ್ನು ಒಂದೇ ಕಡೆ ನಡೆಸಲು ಕಟ್ಟಡಕ್ಕೆ ಬೇಕಾಗಿರುವ ಹಣ ಮಂಜೂರು ಮಾಡಲು ಸರ್ಕಾರದವರ ಯೋಜನೆ ಇದೆಯೇ ಹಾಗಿದ್ದಲ್ಲಿ ಈ ಕೆಲಸವನ್ನು ಯಾವಾಗ ಪೂರ್ತಿ ಗೊಳಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ಹೌದು.

ಆ) ಸಿ.ಐ.ಟಿ ಬಿ, ದಾವಣಗೆರೆಯಿಂದ ಸಮರ್ಪಕವಾದ ನಿವೇಶನವನ್ನು ವಶಪಡಿಸಿಕೊಂಡ ನಂತರ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು, ಕಟ್ಟಡವನ್ನು ಕಟ್ಟಲು ಬೇಕಾದ ಹಣವನ್ನು ಮಂಜೂರು ಮಾಡಲಾಗುವುದು.

ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಅನುಮೋದಿಸಿದ್ದಾರೆ.

## ಗುಲ್ಬರ್ಗ ಜಿಲ್ಲೆಯ ಆಳಂದ್‌ನಲ್ಲಿ ಬಸ್ ಡಿಪೋ ಪ್ರಾರಂಭಿಸುವ ಬಗ್ಗೆ

೧೯೩೩. ಶ್ರೀ ಶರಣ ಬಸಪ್ಪ ಪಾಟೀಲ್(ಆಳಂದ್).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಗುಲ್ಬರ್ಗ ಜಿಲ್ಲೆಯ ಆಳಂದ್‌ನಲ್ಲಿ ಬಸ್ ಡಿಪೋ ಪ್ರಾರಂಭಿಸುವ ಬಗ್ಗೆ ಎರಡು ವರ್ಷಗಳ ಹಿಂದೆ ಅನುಮತಿ ನೀಡಿದ್ದರೇ ;

ಆ) ಹಾಗಿದ್ದಲ್ಲಿ ಈವರೆಗೂ ಬಸ್ ಡಿಪೋ ಪ್ರಾರಂಭಿಸದಿರುವುದಕ್ಕೆ ಕಾರಣವೇನು ;

ಇ) ಅನುಮತಿ ನೀಡದಿದ್ದಲ್ಲಿ, ಅದಕ್ಕೆ ಕಾರಣವೇನು ;

ಈ) ಮಾಜಿ ವಿಧಾನ ಸಭಾ ಸದಸ್ಯರ ಕಾಲದಲ್ಲಿ ಬಸ್ ಡಿಪೋ ಪ್ರಾರಂಭಿಸಲು ಅನುಮತಿ ನೀಡಿದ್ದು, ಹಾಲಿ ವಿಧಾನ ಸಭಾ ಸದಸ್ಯರ ಕಾಲದಲ್ಲಿ ಅನುಮತಿಯನ್ನು ನಿರಾಕರಿಸಲಾಗಿದೆ ಎಂಬುದು ನಿಜವೇ

ಉ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ;

ಊ) ಈಗಲಾದರೂ ಸರ್ಕಾರದವರು ಬಸ್ ಡಿಪೋ ಪ್ರಾರಂಭಿಸಲು ಅನುಮತಿ ನೀಡುವರೇ ?

ಶ್ರೀ ಪಿ.ಜಿ ಆರ್. ಸಿಂಧ್ಯ (ಸಾರಿಗೆ ರಾಜ್ಯ ಸಚಿವರು);—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಆಳಂದ್‌ನಲ್ಲಿ ಬಸ್ ಡಿಪೋ ಪ್ರಾರಂಭಿಸುವ ಬಗ್ಗೆ ಇಚ್ಛೆಯನ್ನು ಸೂಚಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಆಳಂದ್‌ನಿಂದ ಸೀಮಿತ ಅನುಸೂಚಿಗಳನ್ನಷ್ಟೇ ಓಡಿಸಲು ಸಾಧ್ಯ. ಆದ್ದರಿಂದ ಅಲ್ಲಿ ಘಟಕ ಅವಶ್ಯಕವೆಂದು ಪರಿಗಣಿಸಲ್ಪಟ್ಟಿಲ್ಲ.

ಈ) ನಿಜವಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಇಲ್ಲ.

## ೨೬-೨-೮೬ರ ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ವಿ. ಲಕ್ಷ್ಮೀಸಾಗರ್.—ದಿನಾಂಕ ೨೬-೨-೮೬ರಂದು ಸದನದಲ್ಲಿ ಉತ್ತರಿಸಲಿಕ್ಕೆ ಗೊತ್ತು ಪಡಿಸಲಾದ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ. ಇವತ್ತಿನ ಬರಹದ ಮೂಲಕ ಉತ್ತರಿಸತಕ್ಕಂಥ ಪ್ರಶ್ನೆಗಳ ಉತ್ತರದ ಪಟ್ಟಿಯನ್ನು ಸಹ ಸಭೆಯ ಮುಂದೆ ಇಡುತ್ತಿದ್ದೇನೆ.

ಅಧ್ಯಕ್ಷರು.—ಉತ್ತರಗಳನ್ನು ಸಭೆಯ ಮುಂದಿಡಲಾಗಿದೆ.